ರೂಪಕಗಳು, ಚಂದದ ಅನ್ಯೋಕ್ತಿ ಇದಿಷ್ಟನ್ನು ಬಹಳ ಎಚ್ಚರಿಕೆಯಿಂದ, ಸ್ಪಷ್ಟವಾಗಿ ಅರ್ಥವಾಗುವಂತೆ ಬಳಸುತ್ತೇನೆ.

◆ **ಇವು ನಿಮಗೆ ಸಹಜವಾಗಿ ಒಲಿದು ಬರುತ್ತವೆಯೇ?**

ನಾನೇನು ಬುದ್ಧಿವಂತನಲ್ಲ. ಅಹಂಕಾರಿಯಲ್ಲ. ನನ್ನ ಪುಸ್ತಕಗಳನ್ನು ಓದುವ ಜನರಂತೆ ನಾನು ಕೂಡ. ಮೊದಲು ಜಾಝ್ ಕ್ಲಬ್ ಇಟ್ಟುಕೊಂಡಿದ್ದೆ. ಕಾಕ್‌ಟೈಲ್, ಸ್ಯಾಂಡ್‌ವಿಚ್ ಮಾಡುತ್ತಿದ್ದೆ. ಲೇಖಕನಾಗಬೇಕು ಎಂದುಕೊಂಡಿರಲಿಲ್ಲ. ಅದು ಘಟಿಸಿತು, ಅಷ್ಟೇ. ಅದೊಂದು ರೀತಿಯ ವರ. ಅದಕ್ಕೆ ವಿನಮ್ರನಾಗಿರಬೇಕು.

◆ **ಲೇಖಕನಾದಾಗ ಅಚ್ಚರಿಯಾಯಿತೇ? ಆಗ ನಿಮ್ಮ ವಯಸ್ಸೆಷ್ಟು?**

ಹೌದು ಅಚ್ಚರಿಯಾಯಿತು. ನನಗಾಗ ಇಪ್ಪತ್ತೊಂಬತ್ತು ವರ್ಷ. ಬರವಣಿಗೆಗೆ ತಕ್ಷಣವೇ ಒಗ್ಗಿಕೊಂಡುಬಿಟ್ಟೆ.

◆ **ತಕ್ಷಣವೇ? ಮೊದಲ ದಿನವೇ ಆರಾಮಾಗಿ ಬರೆದುಬಿಟ್ಟರಾ?**

ಅಡುಗೆಮನೆ ಕಟ್ಟೆಯ ಮೇಲೆ ಮಧ್ಯರಾತ್ರಿಯ ಅನಂತರ ಕೂತು ಬರೆಯಲು ಶುರುಮಾಡಿದೆ. ಮೊದಲನೆಯ ಪುಸ್ತಕ ಮುಗಿಸಲು ಹತ್ತು ತಿಂಗಳು ಬೇಕಾಯಿತು. ಅದನ್ನು ಪ್ರಕಾಶಕನಿಗೆ ಕಳುಹಿಸಿದಾಗ ಅದಕ್ಕೆ ಬಹುಮಾನ ಬಂತು. ಎಲ್ಲ ಕನಸಿನಂತೆ ಅನ್ನಿಸಿ ಅಚ್ಚರಿಯಾಯಿತು.

◆ **ನಿಮ್ಮ ಮೇಲೆ ಪ್ರಭಾವ ಬೀರಿದ ಜಪಾನಿ ಲೇಖಕರು ಯಾರು?**

ಬಾಲ್ಯದಲ್ಲಾಗಲಿ ಹರೆಯದಲ್ಲಾಗಲಿ ಹೆಚ್ಚು ಜಪಾನಿ ಲೇಖಕರನ್ನು ಓದಿಲ್ಲ. ಈ ಸಂಸ್ಕೃತಿಯಿಂದ ಓಡಿಹೋಗಬೇಕೆಂದಿದ್ದೆ. ಇದು ಬಹಳ ಜಿಗುಟಾದ ಬೋರಿಂಗ್ ಸಂಸ್ಕೃತಿ ಅನ್ನಿಸಿತ್ತು.

◆ **ನಿಮ್ಮ ತಂದೆ ಜಪಾನಿ ಸಾಹಿತ್ಯದ ಅಧ್ಯಾಪಕರಲ್ಲವೇ?**

ಹೌದು. ಅದೊಂತರ ಅಪ್ಪ ಮಗನ ಸಂಬಂಧದ ಕತೆ ಕೂಡ. ನಾನು ಪಾಶ್ಚಾತ್ಯ ಸಂಸ್ಕೃತಿ ಕಡೆ ಹೋದೆ. ಜಾಝ್ ಸಂಗೀತ, ದಾಸ್ತೋವೆಸ್ಕಿ, ಕಾಫ್ಕ, ರೇಮಂಡ್ ಚಾಂಡ್ಲರ್ – ನನ್ನ ಫ್ಯಾಂಟಸಿ ಪ್ರಪಂಚದಲ್ಲಿ ಇವರೆಲ್ಲ ಇದ್ದರು. ಕಾದಂಬರಿ ಓದುತ್ತಾ ಪೀಟರ್ಸ್‌ಬರ್ಗ್, ಹಾಲಿವುಡ್ ಹೀಗೆ ಎಲ್ಲಿಗೆ ಬೇಕಾದರೂ ಹೋಗಬಹುದು. ಕಾದಂಬರಿಯ ತಾಕತ್ತು ಅದು. ಹೀಗೆ ಓದುತ್ತಾ ಸಂಗೀತ ಕೇಳುತ್ತಾ ನನಗೆ ಬೇಕೆಂದಲ್ಲಿಗೆ ಹೋಗುತ್ತಿದ್ದೆ. ಅದೊಂದು ಕನಸಿನಂತಹ ಮನಃಸ್ಥಿತಿ.

◆ **ಇದೇ ನಿಮ್ಮನ್ನು ಬರವಣಿಗೆಯತ್ತ ಕೊಂಡೊಯ್ದಿತೆ?**

ಹೌದು. ನನ್ನ ಇಪ್ಪತ್ತೊಂಬತ್ತನೆಯ ವಯಸ್ಸಿನಲ್ಲಿ ಸುಮ್ಮನೆ ಕಾದಂಬರಿ ಬರೆಯಲು ಶುರುಮಾಡಿದೆ. ಏನಾದರೂ ಬರೆಯಬೇಕು ಅನ್ನಿಸಿತು. ಏನೂಂತ ಗೊತ್ತಿರಲಿಲ್ಲ. ಜಪಾನಿ ಭಾಷೆಯಲ್ಲಿ ಹೇಗೆ ಬರೆಯುವುದು ಅಂತಲೂ ಗೊತ್ತಿರಲಿಲ್ಲ. ಜಪಾನಿ ಲೇಖಕರನ್ನು ಓದೇ ಇರಲಿಲ್ಲ. ಹಾಗಾಗಿ, ನಾನು ಓದಿದ್ದ ಪಾಶ್ಚಾತ್ಯ ಪುಸ್ತಕಗಳಿಂದ ಶೈಲಿ, ಸ್ವರೂಪ ಎಲ್ಲವನ್ನೂ ಎರವಲಾಗಿ ತೆಗೆದುಕೊಂಡೆ. ಅದರ ಮೂಲಕ ನನ್ನದೇ ಶೈಲಿಯನ್ನು ರೂಪಿಸಿಕೊಂಡೆ. ಅದು ಆರಂಭ.